ಅನುಬಂಧ–4

ಅಧ್ಯಕ್ಷರು: ಕಂದಾಯ ಸಚಿವರದ್ದು ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2009 ಮಂಡನೆ ಮಾಡುವುದಿದೆ. ಇಂದಿನ ಅಜೆಂಡಾದಲ್ಲಿ ಅವರದ್ದು ಮೊದಲಿದೆ.

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು): ನಿನ್ನೆ ಇದನ್ನು ತೆಗೆದುಕೊಂಡಿದ್ದೆವು. ನೀವು ಬೇಡ ಎಂದು ಹೇಳಿದ್ದರಿಂದ ಇವತ್ತು ತೆಗೆದುಕೊಳ್ಳಲಾಗಿದೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರು, ಇದರಲ್ಲಿ ಸ್ವಲ್ಪ ದೀರ್ಘವಾಗಿ ಚರ್ಚೆ ಮಾಡಬೇಕಾಗುತ್ತದೆ. Unauthorized occupants ಇದ್ದಾರಲ್ಲ ಅವರಷ್ಟಕ್ಕೆ ಇದನ್ನು ರೆಗ್ಯುಲರೈಸ್ ಮಾಡುವುದಲ್ಲ. ಒಂದು ಕಡೆ ಎರಡು ಮಹಡಿ ಕಟ್ಟಿರುವ ಕಟ್ಟಡಗಳು, ಅದಕ್ಕೆ ಒಬ್ಬ Structural Engineer Certificate ಕೊಟ್ಟ ತಕ್ಷಣವೇ ರೆಗ್ಯುಲರೈಸ್ ಮಾಡಿಬಿಡಬೇಕೆಂದು ಇದೆ. ಇದರಲ್ಲಿ ದೊಡ್ಡ ದೊಡ್ಡ ಕುಳಗಳೆಲ್ಲಾ ಇದ್ದಾರೆ. ಆದ್ದರಿಂದ ಬೆಂಗಳೂರಿನ ಸುತ್ತ ಮುತ್ತ 30 ಸಾವಿರ ಎಕರೆ ಭೂಮಿಯನ್ನು ಅಕ್ರಮಿಸಿಕೊಂಡಿರುವುದು ರಾಮಸ್ವಾಮಿಯವರ ವರದಿಯಲ್ಲೇ ಇದೆ. ಇದರ ಜೊತೆಗೆ ಒಂದು ತಿದ್ದುಪಡಿಯನ್ನೂ ತಂದು ಬಿಟ್ಟಿದ್ದೀರಿ. ಏಕೆಂದರೆ, except residential purpose ಬಿಟ್ಟು ಬೇರೆ commercial establishmentಗಳು industrial ಗೋಸ್ಕರ ಮಾಡಿಕೊಂಡಿರುವ ಕಟ್ಟಡಗಳು. Agriculture landನಲ್ಲಿ conversion ಇಲ್ಲದೆಯೇ ಬೇರೆ ಉಪಯೋಗಕ್ಕೆ ಇದನ್ನು ಮಾಡಿಕೊಂಡಿರುವಂಥದ್ದು. ಇದರಲ್ಲಿ ಬಹಳ ಜನರು ಜೆ.ಪಿ.ಎ. ಮಾಡಿಕೊಂಡಿದ್ದಾರೆ. ಒಂದು ಲೇಔಟ್ ಮಾಡಿಬಿಟ್ಟಿರುತ್ತಾರೆ. ನೀವು ಏನು ಮಾಡಿದ್ದೀರೆಂದರೆ ಸೆಕ್ಷನ್ 2(ಅ) xiiರಲ್ಲಿ, ಒಬ್ಬ ಬಡವ ಮನೆ ಕಟ್ಟುಕೊಂಡಿರುವವನು prove ಮಾಡಬೇಕು. The burden of proof is on the applicant. ಅವನು ಯಾರೋ ಇವರಿಗೆ ಟೋಪಿ ಹಾಕಿ ಹೊರಟು ಹೋಗಿ ಬಿಟ್ಟಿದ್ದಾನೆ. ಜಮೀನು ಇನ್ಯಾರದ್ದೋ, ಇವನ್ಯಾರೊ ಮಧ್ಯದಲ್ಲಿ ಬಂದ, ಇವನ ಹತ್ತಿರ ದಾಖಲೆ ಇರುವುದಿಲ್ಲ, ಆದ್ದರಿಂದ ಇವನು ಅದನ್ನು prove ಮಾಡುವುದಕ್ಕೆ ಆಗುತ್ತದೆಯೇ? ಅವನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲ. ಒಂದು 5–10 ರೂಪಾಯಿಯ ಛಾಪಾ ಕಾಗದದಲ್ಲಿ ಬರೆಸಿ ತೆಗೆದುಕೊಂಡು ಕಟ್ಟು ಬಿಟ್ಟಿರುತ್ತಾರೆ. ಮೈಸೂರಿನಲ್ಲಿ ಈ ರೀತಿ ಆಗಿದೆ.

ಆದ್ದರಿಂದ ಇದರ ಬಗ್ಗೆ ಸ್ವಲ್ಪ ಚರ್ಚೆ ಮಾಡಬೇಕಾಗುತ್ತದೆ. ಆದ್ದರಿಂದ ಇದನ್ನು ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಎಸ್. ಸುರೇಶ್ ಕುಮಾರ್: ತಾವು ಹೇಳಿದಂತೆ ಅನಂತರ ಚರ್ಚೆ ಮಾಡೋಣ. ನೀವು ಹೇಳಿದಂತೆ burden of proof ಅವನ ಮೇಲೆ ಬಂದಿದೆ ಎಂದು ಹೇಳಿದ್ದೀರಿ. ಆ burden of proof ಏನು ಎಂದರೆ ಈ ಭೂ ಬಳಕೆಯ ಬದಲಾವಣೆ ಅಥವಾ ವ್ಯತ್ಯಾಸ 2009ನೇ ಇಸವಿ ಜನವರಿಗಿಂತ ಮೊದಲು ಆಗಿತ್ತು ಎಂದು prove ಮಾಡುವುದು ಅಷ್ಟೇ.

ಶ್ರೀ ಸಿದ್ದರಾಮಯ್ಯ: ತಾವು ಹೇಳುವುದು ಸರಿ. ಆದರೆ, ಅವರ ಹತ್ತಿರ ಏನೂ ದಾಖಲಾತಿಗಳೇ ಇಲ್ಲದಿದ್ದರೆ ಏನು ಮಾಡುತ್ತಾರೆ. ಮಧ್ಯದಲ್ಲಿ ಯಾರೋ ಜಿ.ಪಿ.ಎ. holder ಇರುತ್ತಾರೆ. Owner of the land ಯಾರೋ ಇರುತ್ತಾರೆ. 5–10 ರೂಪಾಯಿ ಛಾಪಾ ಕಾಗದದಲ್ಲಿ ನಿಮಗೆ ನಿವೇಶನ ಕೊಟ್ಟಿರುತ್ತೇನೆಂದು ಬರೆದುಕೊಟ್ಟು ಬಿಡುತ್ತಾನೆ. ಇವರೇನು ಮಾಡುತ್ತಾರೆ. ಆದ್ದರಿಂದ ಇದರಲ್ಲಿ ಸ್ವಲ್ಪ complications ಇದೆ. ನಾವು ಸ್ವಲ್ಪ ಓದಿಕೊಂಡು ಬಂದು ಚೆನ್ನಾಗಿ ಚರ್ಚೆ ಮಾಡುತ್ತೇವೆ.

Sri T.B. Jayachandra: A part from that, ಒಂದು ಮಾತು, ನಿಮ್ಮ statements, objections and reasons – 'the Government proposed to regularize all such sites and layouts developed prior to 31-12-2008. ಏಕೆ ಇದು? ಈಗಾಗಲೇ ಬೆಂಗಳೂರು 7 ಸಿ.ಎಂ.ಸಿ. ಯನ್ನೆಲ್ಲಾ ಸೇರಿಸಿಕೊಂಡು ಹೊಲಸಾಗಿದೆ. 10–15 ಅಡಿ ರೋಡ್ ಬಿಟ್ಟಿಲ್ಲ. ನಾಳೆ 5 ಅಡಿ ರಸ್ತೆಗೆ ಬಿಟ್ಟಿರುತ್ತಾರೆ. ಅದನ್ನು ನೀವು regularize ಮಾಡಿಬಿಡುತ್ತೀರೋ? Why do you bring that? ಇದನ್ನು ಲೇಟ್ ಎಂದು ಏಕೆ ತಂದಿದ್ದೀರಿ? ಇವತ್ತು ಇದರ ಬಗ್ಗೆ ಚರ್ಚೆ ಮಾಡದೆಯೇ ಪಾಸ್ ಮಾಡಿದರೆ ಅನಾಹುತವೇನಾಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ.

ಅಧ್ಯಕ್ಷರು: ಚರ್ಚೆ ಬೇಡವೆಂದು ಹೇಳಿಯೇ ಇಲ್ಲ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು: 7 ಲಕ್ಷ ಮನೆಗಳಿದೆ. ಅವೆಲ್ಲವನ್ನು ತೆಗೆಯಲು ಆಗುತ್ತದೆಯೇ?

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಒಟ್ಟು 7 ಲಕ್ಷ ಮನೆಗಳಿವೆ. ಅವನ್ನೆಲ್ಲಾ ತೆಗೆಯಲಿಕ್ಕೆ ಆಗುತ್ತದೆಯೇ? ಅದರ ಬಗ್ಗೆ ಚರ್ಚೆ ಮಾಡಿ. ನೀವ್ಯಾಕೆ ಅದರ

ಬಗ್ಗೆ ಯೋಚನೆ ಮಾಡುತ್ತೀರಿ? ಚರ್ಚೆ ಮಾಡಲಿಕ್ಕೆಂದೇ ನಾವಿಲ್ಲಿ ಬಂದಿದ್ದೇವೆ. ಚರ್ಚೆ ಮಾಡದೆ ಓಡಿ ಹೋಗಲಿಕ್ಕೆ ನಾವಿಲ್ಲಿ ಬಂದಿಲ್ಲ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ಚರ್ಚೆ ಮಾಡೋಣ, ಚರ್ಚೆ ಮಾಡದೇ ಅಂಗೀಕಾರ ಮಾಡೋಣ ಎಂದು ನಾವು ಹೇಳಲಿಲ್ಲ.

(ಗೊಂದಲ)

ಅಧ್ಯಕ್ಷರು: ಇದನ್ನು ನಾಳೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಈಗ ಬೆಂಗಳೂರಿನಲ್ಲಿ ಪರಿಸ್ಥಿತಿ ಏನಿದೆ ಎಂಬ ಬಗ್ಗೆ ಬಹುತೇಕ ಎಲ್ಲಾ ಜನ ಸದಸ್ಯರಿಗೂ ಗೊತ್ತಿದೆ. ಸುಮಾರು 7 ಲಕ್ಷ ಕಟ್ಟಡಗಳನ್ನು ಕಟ್ಟಲಾಗಿದೆ. ಅವುಗಳಲ್ಲಿ ನೀರಿನ ವ್ಯವಸ್ಥೆ ಮಾಡಿಕೊಂಡು, ಕರೆಂಟ್ ಅನ್ನು ತೆಗೆದುಕೊಂಡು ಮೂರ್ಮೂರು ಅಂತಸ್ತುಗಳನ್ನು ಕಟ್ಟಿಕೊಂಡಿದ್ದಾರೆ. ಇವುಗಳಿಂದ ಮಹಾನಗರ ಪಾಲಿಕೆ ಆದಾಯವೇನೂ ಬರುತ್ತಿಲ್ಲ. ಅವರಿಗೆ ಏನೊಂದು ಸೌಕರ್ಯಗಳು ಬೇಕೋ ಅವೆಲ್ಲವೂ ಆಗಿವೆ. ಸುಮಾರು 10 ವರ್ಷಗಳಿಂದ ಈ ರೀತಿ ನಡೆದುಕೊಂಡು ಬಂದಿದೆ. ಈಗ ಅಕ್ರಮ-ಸಕ್ರಮ ಮಾಡುವುದರಿಂದ ಅವರಿಗೆ ಯಾವುದಾದರೂ ಲೋನ್ ತೆಗೆದುಕೊಂಡು ಕಟ್ಟಿಕೊಳ್ಳುವುದಕ್ಕೆ ಅವಕಾಶವೂ ಆಗುತ್ತದೆ. ಎರಡನೆಯದಾಗಿ, ಸಕ್ರಮಗೊಳಿಸುವುದರಿಂದ ನಾವು ಆ ಭಾಗವನ್ನು ಅಭಿವೃದ್ಧಿ ಮಾಡಲಿಕ್ಕೆ ಅನುಕೂಲವಾಗುತ್ತದೆ. ಈಗ ಏನೂ ಇಲ್ಲ. 1800 ಕೋಟಿ ರೂ.ಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ಅವರಿಂದ ನಾವು ಒಂದು ರೂಪಾಯಿ ತೆರಿಗೆಯನ್ನೂ ಸಹ ವಸೂಲು ಮಾಡುತ್ತಿಲ್ಲ. ಆದರೆ ಅವರಿಗೆ ಬೇಕಾಗಿರುವಂತಹ ಸೌಲಭ್ಯಗಳನ್ನೆಲ್ಲಾ ಪಡೆದುಕೊಂಡಿದ್ದಾರೆ. ಇದನ್ನು ಸಕ್ರಮಗೊಲಿಸುತ್ತೇವೆ, ಅದರ ಬಗ್ಗೆ ನೀವು ಚರ್ಚೆ ಮಾಡಿ.

ಶ್ರೀ ದಿನೇಶ್ ಗುಂಡೂರಾವ್: ನಾವ್ಯಾರೂ ಇದರ ಬಗ್ಗೆ ವಿರೋಧ ಮಾಡುತ್ತಿಲ್ಲ. ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡೋಣ.

(ಗೊಂದಲ)

ಅಧ್ಯಕ್ಷರು: ಇದನ್ನು ನಾಳೆ ಮಾಡೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ: Regularise ಮಾಬೇಕಾದರೆ ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎಂಬುದನ್ನು ನೋಡಬೇಕಲ್ಲವೇ/

(ಗೊಂದಲ)

ಅಧ್ಯಕ್ಷರು: ಇದನ್ನು ನಾಳೆ ಇಟ್ಟುಕೊಳ್ಳೋಣ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ರಾತ್ರಿ 11 ಗಂಟೆಯವರೆಗೆ ಚರ್ಚೆ ಮಾಡೋಣ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

(ಗೊಂದಲ)

ಅಧ್ಯಕ್ಷರು: ಇದನ್ನು ಸೋಮವಾರ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಸಾರ್, ಚರ್ಚೆ ಮಾಡುವುದಕ್ಕೆ ಈಗ ಎಷ್ಟು ದಿವಸ ಉಳಿದಿದೆ? ಚರ್ಚೆ ಮಾಡಬಾರದು ಎಂಬ ಉದ್ದೇಶ ನಿಮಗಿದ್ದರೆ ನಾವೇನೂ ಮಾಡಲಿಕ್ಕಾಗುವುದಿಲ್ಲ. ಅದಕ್ಕೆ ನಾವೇನೂ ಮಾತನಾಡುವುದಿಲ್ಲ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ಬಹಳ ವಿಶೇಷವಾಗಿ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ನಡೆಯಬೇಕಾಗಿತ್ತು.

ಅಧ್ಯಕ್ಷರು: ಈಗಲೇ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ start ಮಾಡಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ಈ ಸದನವನ್ನು ಇವತ್ತು ಬೇರೆ ಬೇರೆ ಮಾರ್ಗಗಳಿಗೆ ತೆಗೆದುಕೊಂಡು ಹೋಗುವ ಪ್ರಯತ್ನ ನಡೆಯುತ್ತಿದೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ನಾವು ಕ್ಷೇತ್ರದ ಜನಗಳಿಗೆ ಏನು ಹೇಳುವುದು?

(ಗೊಂದಲ)

ಅಧ್ಯಕ್ಷರು: ಹಾಗಾದರೆ ಇಲ್ಲಿಯವರೆಗೆ ಏನೂ ಚರ್ಚೆ ಆಗಿಯೇ ಇಲ್ಲವೇ? ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ಬೇರೆ ಬೇರೆ subjects ಪ್ರಸ್ತಾಪಿಸಿ ಮಾತನಾಡಿದ್ದೀರಿ.

(ಗೊಂದಲ)

ಅಧ್ಯಕ್ಷರು: ಯಾರೂ ಮಾತನಾಡದೆ ಹಾಗೆಯೇ ಸುಮ್ಮನೆ ಕುಳಿತಿದ್ದೇವೆಯೇ?

(ಗೊಂದಲ)

ಅಧ್ಯಕ್ಷರು: ನಿಲುವಳಿ ಸೂಚನೆಯನ್ನು ನೀವು ತೆಗೆದುಕೊಂಡು ಬಂದಿದ್ದೀರಿ. ಅದಕ್ಕೆ ತಾವು ಏಕೆ ಸಹಿ ಮಾಡಿದಿರಿ?

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಅವರು ಚರ್ಚೆ ಮಾಡುವುದಾದರೆ, ರಾತ್ರಿಯೆಲ್ಲಾ ಚರ್ಚೆ ಮಾಡಲಿ. ಅದಕ್ಕೆ ನಾವು ರೆಡಿ ಇದ್ದೇವೆ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಪರಸ್ಪರ ಮಾತನಾಡಬೇಡಿ. ದಯವಿಟ್ಟು ಕುಳಿತುಕೊಳ್ಳಿ. ಕಂದಾಯ ಇಲಾಖೆ ಬಿಲ್ ಅನ್ನು ಸೋಮವಾರ ತೆಗೆದುಕೊಳ್ಳೋಣ.

4. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಚಿವರು): ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಈಗ ಬೆಂಗಳೂರಿನಲ್ಲಿ ಏನಾಗಿದೆ ಎಂದರೆ, ತೊರೆಕಾರನಹಳ್ಳಿಯಿಂದ ಮತ್ತು ತಿಪ್ಪಗೊಂಡನಹಳ್ಳಿಯಿಂದ ಎರಡೂ ಸೇರಿ ನಮಗೆ 850 mld ನೀರನ್ನು ನಾವು ಸರಬರಾಜು ಮಾಡಿಕೊಳ್ಳುತ್ತಿದ್ದೇವೆ. ಆದರೆ ನಮ್ಮ ಬೇಡಿಕೆ ಇರುವುದು 1250 mld ನೀರು ಬೇಕಾಗಿದೆ. ನೀರಿನ ಅಭಾವವಿದೆ. ಬೆಂಗಳೂರಿನಲ್ಲಿ ಸುಮಾರು 10 ಸಾವಿರ ಬೋರ್‌ವೆಲ್‌ಗಳನ್ನು ನಾವು ಕೊರೆದಿದ್ದೇವೆ. ಈಗ ದಿನೇ ದಿನೇ ಮನೆಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಆದರೆ ನೀರಿನ ಅವಶ್ಯಕತೆಯನ್ನು ಪೂರೈಸುವುದಕ್ಕೆ ನಮಗೆ ಆಗುತ್ತಿಲ್ಲ. 24 ಗಂಟೆ ಪಂಪ್ ಮಾಡಿದರೂ ಕೂಡ, ನೀರನ್ನು ಸಮರ್ಪಕವಾಗಿ ಪೂರೈಸಲಿಕ್ಕೆ ಆಗುತ್ತಿಲ್ಲ. CMC, TMC, 110 ಗ್ರಾಮಗಳು ಎಲ್ಲವೂ ಸೇರಿ, ಮೊದಲು 250 ಚದುರ ಕಿಲೋಮೀಟರ್ ಇದ್ದದ್ದು ಇವತ್ತು